ಅಸಲು ದಾವೆ ನಂ.46/2016

ಡಿ.ಡಬ್ಲೂಃ 7- ಉಮಾದೇವಿ ಕೋಂ ನಾಗಭೂಷಣ

ದಿನಾಂಕಃ 06/11/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು 1 ಮತ್ತು 4 ನೇ ಪ್ರತಿವಾದಿಯರ ಪರವಾಗಿ ಶ್ರೀ ಆರ್.ಪಿ. ವಕೀಲರಿಂದ**

1. ದಾವಾ ಐಟಂ ನಂ.7 ಸ್ವತ್ತು ಮೂಲತಃ ನಮ್ಮ ತಾತನಾದ ಮುನಿಯಪ್ಪ ರವರಿಗೆ ಸೇರಿತ್ತು ಎಂದರೆ ಸರಿ. 1 ನೇ ಪ್ರತಿವಾದಿ ಹಾಗೂ ಅವರ ಮಕ್ಕಳ ಮಧ್ಯ ಆಗ ವಿಭಾಗದಲ್ಲಿ ಸದರಿ ಸ್ವತ್ತು 1 ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿತ್ತು ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ ಸ್ವತ್ತನ್ನು ಹೊರತು ಪಡಿಸಿ ಬೇರೆ ಯಾವ ಸ್ವತ್ತುಗಳು ಯಾರ ಹಿಸ್ಸೆಗಳಿಗೆ ಹೋಗಿರುತ್ತವೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ದಾವಾ ಐಟಂ ನಂ.7 ಸ್ವತ್ತು ಈಗ 1 ನೇ ಪ್ರತಿವಾದಿಯ ಸ್ವಾಧೀನದಲ್ಲಿರುವುದಿಲ್ಲ ಹೊರತು ನನ್ನ ಸ್ವಾಧೀನದಲ್ಲಿರುತ್ತದೆ ಎಂದರೆ ಸರಿ.

**ಪಾಟೀ ಸವಾಲು ವಾದಿ ಪರವಾಗಿ ಶ್ರೀ ಎಂ.ಎನ್. ವಕೀಲರಿಂದ**

ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)

**1 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ**

**ಕೆಜಿಎಫ್**

ಅಸಲು ದಾವೆ ನಂ.46/2016

ಡಿ.ಡಬ್ಲೂಃ 6- ವೆಂಕಟರಾಮ ಬಿನ್ ಬತ್ತಪ್ಪ

ದಿನಾಂಕಃ 06/11/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು 1 ಮತ್ತು 4 ನೇ ಪ್ರತಿವಾದಿಯರ ಪರವಾಗಿ ಶ್ರೀ ಆರ್.ಪಿ. ವಕೀಲರಿಂದ**

4. ನನಗೆ 1 ನೇ ಪ್ರತಿವಾದಿಯ ಕುಟುಂಬದ ಬಗ್ಗೆ ಮಾಹಿತಿ ಇರುತ್ತದೆ. ಅವರಿಗೆ ಒಟ್ಟು 6 ಜನ ಮಕ್ಕಳಿದ್ದು ಅವರಲ್ಲಿ 2 ಗಂಡು ಮತ್ತು 4 ಹೆಣ್ಣು ಮಕ್ಕಳು ಇದ್ದು ಗಂಡು ಮಕ್ಕಳ ಹೆಸರು ನಾರಾಯಣಸ್ವಾಮಿ ಮತ್ತು ಬೈರೇಗೌಡ ಹಾಗೂ ಹೆಣ್ಣು ಮಕ್ಕಳ ಹೆಸರುಗಳು ಶಾಮಲಮ್ಮ, ಲಕ್ಷ್ಮಿದೇವಿ, ಮುನಿರತ್ನಮ್ಮ ಮತ್ತು ರೂಪಾ ಆಗಿರುತ್ತವೆ. 1 ನೇ ಪ್ರತಿವಾದಿಯು ಅವಿದ್ಯಾವಂತರು ಎಂದರೆ ಸರಿಯಲ್ಲ ಆದರೆ ಅವರು 6 ನೇ ತರಗತಿವರೆಗೆ ಓದಿರುತ್ತಾರೆ.

5. 1 ನೇ ಪ್ರತಿವಾದಿಯು 5 ನೇ ಪ್ರತಿವಾದಿಯ ಹೆಸರಿಗೆ ಬರೆದುಕೊಟ್ಟ ಕ್ರಯ ಪತ್ರದ ಬಗ್ಗೆ ನನಗೆ ಮಾಹಿತಿ ಇರುತ್ತದೆ ಕಾರಣ ಕ್ರಯ ಪತ್ರ ಆಗುವಾಗ ನಾನು ಹಾಜರಿದ್ದೆ. ಸದರಿ ಕ್ರಯ ಪತ್ರವು ದಿನಾಂಕ 13.06.2013 ರಂದು ಆಗಿರುತ್ತದೆ. ಸದರಿ ಕ್ರಯ ಪತ್ರಕ್ಕೆ ನಾನು ಸಹಿ ಹಾಕಿರುವುದಿಲ್ಲ ಆದರೆ 1 ನೇ ಪ್ರತಿವಾದಿಯ ಹಾಗೂ ಸಾಕ್ಷಿದಾರರಾದ ಶಿವಣ್ಣ, ನಾರಾಯಣ ಸ್ವಾಮಿ ಮತ್ತು ರೆಡ್ಡಪ್ಪ ರವರು ಹಾಕಿರುತ್ತಾರೆ. ಸದರಿ ಸಾಕ್ಷಿದಾರರಾದ ನಾರಾಯಣಸ್ವಾಮಿ ರವರೇ ಈ ದಾವೆಯ 2 ನೇ ಪ್ರತಿವಾದಿ ಆಗಿರುತ್ತಾರೆ. ಕ್ರಯ ಪತ್ರವನ್ನು ತಯಾರಿಸಲು 1 ನೇ ಪ್ರತಿವಾದಿಯೇ ಮಾಹಿತಿ ಕೊಟ್ಟಿರುತ್ತಾರೆ. ಕ್ರಯ ಪತ್ರ ಆಗುವ ಸಮಯದಲ್ಲಿ ನಾನು ಹಾಜರಿದ್ದೆ ಮತ್ತು ಮೇಲೆ ಹೇಳಿದವರೆಲ್ಲರೂ ಅದಕ್ಕೆ ಸಹಿ ಮಾಡಿರುತ್ತಾರೆ ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ.

6. 5 ನೇ ಪ್ರತಿವಾದಿಯು ಈಗ ಆರೋಗ್ಯದಿಂದ ಇರುತ್ತಾರೆ ಎಂದರೆ ಸರಿಯಲ್ಲ ಆದರೆ ಅವರಿಗೆ ಮೂರ್ಛೆ ಖಾಯಿಲೆ ಇರುವುದರಿಂದ ಅವರಿಗೆ ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ. ಅವರಿಗೆ ಸದರಿ ಖಾಯಿಲೆಯು ಈಗ ಸುಮಾರು 2012 ರಿಂದ ಇರುತ್ತದೆ. 5 ನೇ ಪ್ರತಿವಾದಿಯು ಒಳ್ಳೆಯ ಆರೋಗ್ಯದಿಂದ ಇದ್ದು ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದರೆ ನಿಜಾಂಶ ಗೊತ್ತಾಗುತ್ತದೆ ಎಂದು ತಿಳಿದು ಅವರಿಗೆ ಬರಲು ಆಗುವುದಿಲ್ಲ ಎಂದು ಹೇಳಿ ನಾನು ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 5 ನೇ ಪ್ರತಿವಾದಿಯ ಆರೋಗ್ಯದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ ಹೊರತು 5 ನೇ ಪ್ರತಿವಾದಿ ಅಲ್ಲ.

7. ದಾವಾ ಐಟಂ ನಂ.16 ಸ್ವತ್ತು 1 ನೇ ಪ್ರತಿವಾದಿಗೆ ಯಾವ ರೀತಿಯಲ್ಲಿ ಮತ್ತು ಯಾವಾಗ ಬಂದಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯರು ಮತ್ತು 1 ನೇ

ಪ್ರತಿವಾದಿಯರೆಲ್ಲರೂ ಒಟ್ಟು ಕುಟುಂಬದಲ್ಲಿ ವಾಸವಾಗಿರುವಾಗ ಸದರಿ ಸ್ವತ್ತನ್ನು ಪಂಚಾಯ್ತಿಯವರು 1 ನೇ ಪ್ರತಿವಾದಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ ಆದರೆ ಅವರು ಪ್ರತ್ಯೇಕವಾಗಿ ಇರುವಾಗ ಕೊಟ್ಟಿರುತ್ತಾರೆ. ಸದರಿ ಸ್ವತ್ತನ್ನು ಒಟ್ಟು ಕುಟುಂಬದಲ್ಲಿ ಇರುವಾಗ 1 ನೇ ಪ್ರತಿವಾದಿಯು ಸಂಪಾದಿಸಿದ್ದರೂ ಸಹ ನಾನು ಮತ್ತು 2 ನೇ ಪ್ರತಿವಾದಿಯು ಅದನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಅವಿದ್ಯಾವಂತರಾಗಿದ್ದು ದಾವಾ ಐಟಂ ನಂ.16 ಸ್ವತ್ತನ್ನು ಹೇಗಾದರೂ ಮಾಡಿ 1 ನೇ ಪ್ರತಿವಾದಿಯಿಂದ ಕಬಳಿಸಿಕೊಳ್ಳುವ ಉದ್ದೇಶದಿಂದ ನಾನು ಮತ್ತು 2 ನೇ ಪ್ರತಿವಾದಿಯು 5 ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರಯ ಪತ್ರ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

8. 5 ನೇ ಪ್ರತಿವಾದಿಯ ಹೆಸರಿಗೆ ಕ್ರಯ ಪತ್ರ ಆಗುವುದಕ್ಕೂ ಮುಂಚೆ 2 ನೇ ಪ್ರತಿವಾದಿಯೇ ತಮ್ಮ ಒಟ್ಟು ಕುಟುಬಂದ ಉಸ್ತುವಾರಿಯನ್ನು ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.

**<u>ಪಾಟೀ ಸವಾಲು 3 ನೇ ಪ್ರತಿವಾದಿ ಪರವಾಗಿ ಶ್ರೀ ಟಿ.ಎನ್.ಸಿ. ವಕೀಲರಿಂದ</u>**

ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

**ಮರು ವಿಚಾರಣೆ**: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
1 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್